**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.132/2016</u>**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ 1. ಅಮೋಗಿ ತಂದೆ ಸಿದ್ರಾಮ ಕಾಮನಕೇರಿ,
35 ವರ್ಷ, ಉಃ ಒಕ್ಕಲುತನ,

2. ತುಕಾರಾಮ ತಂದೆ ಸಿದ್ರಾಮ ಕಾಮನಕೆರಿ,
40 ವರ್ಷ, ಉಃ ಒಕ್ಕಲುತನ,

3. ಭೀಮಶಾ ತಂದೆ ಬಸಣ್ಣ ಹಾದಿಮನಿ,
35 ವರ್ಷ, ಉಃ ಒಕ್ಕಲುತನ, **(Split-up)**

ಎಲ್ಲರ ವಾಸಃ ಕರಜಗಿ ರಾಮು,
ತಾಃ ಅಫಜಲಪೂರ, ಜಿಃ ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-1

ಆ-2

ಪ್ರಃ2: ಪ್ರಾಸಾ-3 ಮಹಾದೇವ ಬಳಗಾರ ತಂದೆ ದರ್ಮಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಆರೋಪಿತರ ಪರಿಚಯವಿದೆ. ತನ್ನ ಹಾಗೂ ಆರೋಪಿತರ ಜಮೀನು ಅಕ್ಕಪಕ್ಕದಲ್ಲಿವೆ. ಕರಜಗಿ ಸೀಮಾಂತರದಲ್ಲಿಯ ಜಮೀನು ಸರ್ವೆ ನಂ.234 ವಿಸ್ತೀರ್ಣ 4 ಎಕರೆ 5 ಗುಂಟೆ ತನಗೆ ಸಂಬಂಧಿಸಿದ್ದು ಇದ್ದು, ಅದರಂತೆ ಸರ್ವೆ ನಂ.235 1ನೇ ಆರೋಪಿತನ ಜಮೀನು ಇದೆ. ಈಗ್ಗೆ 3 ವರ್ಷಗಳ ಹಿಂದೆ ಸಾಯಂಕಾಲ 05-00 ಗಂಟೆಗೆ ರೈತಾಪಿ ಕೆಲಸ ಮಾಡುತ್ತಿದ್ದಾಗ, 1ನೇ ಆರೋಪಿ ತನ್ನ ಜಮೀನಿನ ಬಾಂದಾರಿಯನ್ನು ಅತೀಕ್ರಮಿಸದಂತೆ ವಿನಂತಿಸಿದಾಗ ತನ್ನ ಹಾಗೂ ಆತನ ನಡುವೆ ಬಾಯಿ ಮಾತಿನ ತಕರಾರು ಆಗಿರುತ್ತದೆ. ಆನಂತರ ಮನೆಗೆ ಬಂದಾಗ ಸಾಯಂಕಾಲ 07-00 ಗಂಟೆಗೆ ಚಾಸಾ-6 ರವರ ಮನೆಯ ಮುಂದೆ ಆರೋಪಿತರೆಲ್ಲರೂ ಬಂದು 1ನೇ ಆರೋಪಿ ಕೊಡಲಿಯಿಂದ ತಲೆಗೆ ಹಲ್ಲೆ ಮಾಡಿ, ಮೈಕೈಗೆ ಒದೆಯುವುದು ಕೈಯಿಂದ ಹೊಡೆಯುದು ಮಾಡಿರುತ್ತಾನೆಂದು ಹಾಗೂ 2ನೇ ಆರೋಪಿ ತೆಕ್ಕೆ ಕುಸ್ತಿಬಿದ್ದು ಕೈಯಿಂದ ಹೊಡೆ-ಬಡೆ ಮಾಡಿರುತ್ತಾನೆಂದು ಹಾಗೂ 03ನೇ ಆರೋಪಿ ಕಲ್ಲಿನಿಂದ ಬೆನ್ನಿನ ಮೇಲೆ ಹಲ್ಲೆ

ಮಾಡಿರುತ್ತಾನೆ. ಘಟನೆಯನ್ನು ಚಾಸಾ-5 ರಿಂದ 7 ರವರು ಬಿಡಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 3 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಘಟನೆಯಾದ ನಂತರ ಠಾಣೆಗೆ ಹೋಗಿ ಫಿರ್ಯಾದಿ ನೀಡಿದ ನಂತರ ಚಿಕಿತ್ಸೆಗೆಂದು ಅಫಜಲಪೂರ ಸರಕಾರಿ ಆ್ಪತ್ರೆಗೆ ದಾಖಲಿಸಿರುತ್ತಾರೆ. ಅದೇ ದಿನ ರಾತ್ರಿ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಬಸವೇಶ್ವರ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ತನ್ನ ಚಿಕಿತ್ಸಾ ವೆಚ್ಚಕ್ಕೆಂದು ಅಂದಾಜು 25-30 ಸಾವಿರ ಖರ್ಚಾಗಿರುತ್ತದೆ. ಘಟನಾ ಸ್ಥಳವನ್ನು ಪೊಲೀಸರು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 4 ಪ್ರಾಸಾ-05 ಶರಣಪ್ಪ ಬಳಗಾರ ತಂದೆ ಲಗಮಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರ ಪರಿಚಯವಿದೆ. ಚಾಸಾ-1 ತನ್ನ ತಮ್ಮನಾಗಬೇಕು. 3ನೇ ಆರೋಪಿತನು ಸಬಂಧಿಕನಾಗಬೇಕು. ಈಗ್ಗೆ 02 ವರ್ಷದ ಹಿಂದೆ ಆರೋಪಿತರು ಸಾಯಂಕಾಲ 06-30 ಗಂಟೆಗೆ ಹೊಲದ ಸೀಮೆ ಸಲುವಾಗಿ ಚಾಸಾ-1 ರವರಿಗೆ ತಮ್ಮ ಮನೆಯ ಮುಂದೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿತನು ಬಡಿಗೆಯಿಂದ ತಲೆಗೆ ಹೊಡೆದಿರುತ್ತಾನೆಂದು ಹಾಗೂ 2 ಮತ್ತು 3ನೇ ಆರೋಪಿತರು ಓಡಿ ಬಂದು ಚಾಸಾ-1 ರವರನ್ನು ಹಿಡಿದುಕೊಂಡಿದ್ದರು. ಘಟನೆಯಾದ ನಂತರ ತಾನು ಹಾಗೂ ರಾಯಪ್ಪ ಕೂಡಿ ಚಾಸಾ-1 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆಂದು ಹಾಗೂ ಆಸ್ಪತ್ರೆಯಲ್ಲಿ ಚಾಸಾ-1 ರವರು 02 ದಿನ ಚಿಕಿತ್ಸೆ ಪಡೆದಿರುತ್ತಾನೆಂದು ಹಾಗೂ ಸಾಕ್ಷಿ ಹಲ್ಲೆಗೆ ಬಳಸಿದ ಬಡಿಗೆಯನ್ನು ತೋರಿಸಲಾಗಿ ಆ ದಿನ ಬೇರೆ ಬಡಿಗೆಯಿತ್ತು ಎಂದು ನುಡಿಯುತ್ತಾರೆ. ಘಟನೆ ಸಮಯದಲ್ಲಿ ಬಹಳ ಜನರಿದ್ದರು. ಘಟನೆ ಸಮಯದಲ್ಲಿ ಚಾಸಾ-5, 6, 8 ರವರು ಇದ್ದರು. ಘಟನೆ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 5 ಪ್ರಾಸಾ-06 ಸಾಯಬಣ್ಣ ಜಮಾದಾರ ತಂದೆ ಶಾವಣ್ಣ ನಿವೃತ್ತ ಎ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 11.09.2015 ರಂದು ಮುಂಜಾನೆ 09-00 ಗಂಟೆಗೆ ಸರಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ವರದಿ ಬಂದಿದ್ದು, ಮುಂಜಾನೆ 09-15 ಗಂಟೆಗೆ ಆಸ್ಪತ್ರೆಗೆ ಭೇಟಿ

ನೀಡಿ, ಗಾಯಾಳುವಿನ ಹೇಳಿಕೆ ಮತ್ತು ಫಿರ್ಯಾದಿಯನ್ನು ಪಡೆದು, ಸದರಿ ಹೇಳಿಕೆ ಫಿರ್ಯಾದಿಯ ಆಧಾರದ ಮೇಲಿಂದ ಠಾಣಾ ಗುನ್ನೆ ನಂ.247/2015 ಎಂದು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 6 ಪ್ರಾಸಾ-06 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆನಂತರ ದಿನಾಂಕಃ 12.09.2015 ರಂದು ಮುಂಜಾನೆ 09 ರಿಂದ 10 ಗಂಟೆವರೆಗೆ ಚಾಸಾ-8 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆ ಮಾಡಿ ಸ್ಥಳದಿಂದ ಹಲ್ಲೆಗೆ ಬಳಸಿದ ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡು ಪಂಚನಾಮೆ ಬರೆದು ಓದಿ ಹೇಳಿ ಚಾಸಾ-2 ಮತ್ತು 3 ರವರ ಸಹಿ ಪಡೆದುಕೊಂಡು, ಘಟನೆ ಕುರಿತು ಚಾಸಾ-4 ರಿಂದ 9 ರವರ ಹೇಳಿಕೆ ಪಡೆದುಕೊಂಡು, ಚಾಸಾ-7 ರವರು ನಿಶಾನೆ ಪಿ-1 ರಂತೆ ಹೇಳಿಕೆ ನೀಡಿರುತ್ತಾರೆಂದು ಹಾಗೂ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-11 ರವರು ವಹಿಸಿಕೊಂಡಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 7 ಪ್ರಾಸಾ-07 ಡಾಃ ಅಬ್ದುಲ್ ಅಜೀಜ ತಂದೆ ಅಬ್ದುಲ್ ಸಲೀಮ, ವೈದ್ಯಾಧಿಕಾರಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 11.09.2015 ರಂದು ರಾತ್ರಿ 11-10 ಗಂಟೆ ಸಮಯದಲ್ಲಿ ಚಾಸಾ-1 ರವರು ಹಲ್ಲೆಯ ಇತಿಹಾಸದೊಂದಿಗೆ ಚಿಕಿತ್ಸೆಗೆಂದು ಬಂದಿದ್ದು ಅವರನ್ನು ಪರೀಕ್ಷಿಸಲಾಗಿ 7x3x2cm ಅಳತೆಯ ಎಡ ಹಣೆಯ ಹರಿದ ಗಾಯ ಕಂಡುಬಂದಿದ್ದು ಸದರಿ ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು, ಗಟ್ಟಿಯಾದ ಮತ್ತು ಚೂಪಾದ ವಸ್ತುವಿನಿಂದ ಹಲ್ಲೆ ಮಾಡಿದರೆ ಸಂಭವಿಸಬಹುದು. ಈ ಕುರಿತು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 8 ಪ್ರಾಸಾ-08 ಸಿದರಾಯ ಬೋಸಗಿ ತಂದೆ ಜಟ್ಟೆಪ್ಪ ತಹಶೀಲ್ದಾರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 10.11.2015 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-10(ಎ) ರವರಿಂದ ವಹಿಸಿಕೊಂಡು, ಗಾಯಾಳು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತ ಪರಿಶೀಲಿಸಿ ಅದೇ ದಿನ ಆರೋಪಿ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರಃ 9 ಪ್ರಾಸಾ-09 ಚಾನಪ್ಪ ತಂದೆ ಲಗಮಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಮತ್ತು ಚಾಸಾ-4 ರವರ ಪರಿಚಯ ಇರುತ್ತದೆ. ಹೊಲದಲ್ಲಿ ಜಗಳವಾಡಿದ್ದು ಇರುತ್ತದೆ, ಆ ನಂತರ ಮನೆಗೆ ಬಂದಾಗ ಆರೋಪಿತರು ಚಾಸಾ-1 ರವರಿಗೆ 1ನೇ ಆರೋಪಿಯು ಕೈಯಲ್ಲಿ ಕೊಡಲಿ ಹಿಡಿದುಕೊಂಡು ಬಂದಿದ್ದು, ಕೊಡಲಿ ಕಾವಿನಿಂದ ತನ್ನ ತಮ್ಮ ಚಾಸಾ-1 ರವರಿಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆಂದು ಆಗ ಜನ ಸೇರಿದ್ದು ತಾವು ಹೋಗಿ ನೋಡಿದಾಗ ತಲೆಯಿಂದ ರಕ್ತಸ್ರಾವ ಆಗುತ್ತಿತ್ತು. ಆ ನಂತರ ಚಾಸಾ-1 ರವರನ್ನು ಅಫಜಲಪೂರದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ದಾಖಲು ಮಾಡಿರುತ್ತೇವೆ. ಆ ನಂತರ ಪೋಲಿಸ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ನೀಡಿರುತ್ತೇವೆಂದು ಹಾಗೂ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಪ್ರ-10 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-1

ಆ-2

ಪ್ರ-11 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-1

ಆ-2

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 10.06.2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.